ಶ್ರೀ ಪಂಪಾಪತಿ.—ಜಯನಗರದ ೮ನೇ ಬ್ಲಾಕಿನಲ್ಲಿ ನೀರಿನ ತೊಂದರೆಯಿದೆ ಎಂದು ಈಗಲೂ ನನಗೆ ಮಾಹಿತಿ ಬಂದಿದೆ. ಈ ಕೊರತೆಯನ್ನು ಮಾನ್ಯ ಮಂತ್ರಿಗಳು ಗಮನಿಸಿ ಸೂಕ್ತ ಕ್ರಮ ತೆಗೆದು ಕೊಳ್ಳುವರೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆಗಬಹುದು.

ಶ್ರೀ ಪಿ. ರಾಮದೇವ್.—ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಸ್ವಲ್ಪ ಮಟ್ಟಿಗೆ ಪರಿಹಾರ ವಾಗಿದೆಯೆನ್ನುವುದನ್ನು ನಾನು ಒಪ್ಪಿ ಕೊಳ್ಳಬೇಕಾಗುತ್ತದೆ. ಆದರೂ ಸಹ ಬುಧವಾರದ ದಿವಸ ಕೆಲವು ಕಡೆಗಳಲ್ಲಿ ನೀರಿನ ಸರಬರಾಜು ಇರುವುದಿಲ್ಲ. ಈ ತೊಂದರೆಯನ್ನು ಹೋಗಲಾಡಿಸಿ ವಾರದ ಏಳು ದಿನಗಳಲ್ಲಿಯೂ ನೀರನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರ ಪ್ರಶ್ನೆಗೆ ಈಗ ಮಾಹಿತಿ ನನ್ನಲ್ಲಿಲ್ಲ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ನಗರದಲ್ಲಿ ಕೆಲವು ಕಡೆಗಳಲ್ಲಿ ನೀರು ಸರಬರಾಜು ಆಗದೇ ಇರುವುದಕ್ಕೆ ಕಾರಣ, ಹಿಂದಿದ್ದ ಪೈಪ್ಸ್‌ನ್ನು ರೀಪ್ಲೇಸ್ ಮಾಡುವ ಕೆಲಸ ನಡೆಯಬೇಕಾಗಿದೆ. ಭದ್ರಾವತಿ ಯಲ್ಲಿ ಈ ಪೈಪ್ಸ್‌ಗಳು ತ್ವರಿತ ಗತಿಯಲ್ಲಿ ತಯಾರಾಗದೆ ಇರುವುದರಿಂದ ಈ ತೊಂದರೆಯಿದೆ. ಅದಕ್ಕೆ ಪಿ.ವಿ.ಸಿ. ಪೈಪ್‌ಗಳನ್ನು ಹಾಕಿಕೊಳ್ಳಬಹುದು. ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಹಳೆಯ ಪೈಪ್‌ಗಳು ಇವೆ, ಆಲ್ಲೆಲ್ಲಾ ಕ್ಯಾಸ್ಟ್ ಐರನ್ ಪೈಪ್ಸ್ ಅಥವಾ ಪಿ.ವಿ.ಸಿ ಪೈಪ್‌ಗಳನ್ನು ಹಾಕಿ ಸಲೀಸಾಗಿ ನೀರು ಹರಿದು ಹೋಗುವುದಕ್ಕೆ ವ್ಯವಸ್ಥೆ ಮಾಡಿಕೊಡುವ ಬಗ್ಗೆ ಒಂದು ಭರವಸೆಯನ್ನು ಮಾನ್ಯ ಮಂತ್ರಿ ಯವರು ಕೊಡುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದಕ್ಕೆ ಸಂಬಂಧಪಟ್ಟ ಮಂತ್ರಿಯವರು ಶಾಸಕರ ಜೊತೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. ಈ ಒಂದು ಸಮಸ್ಯೆಯನ್ನು ಬಗೆಹರಿಸಬೇಕೆನ್ನುವ ದೃಷ್ಟಿಯಿಂದ ಶಾಸಕರನ್ನು ಅನೇಕ ಸಾರಿ ಕರೆಸಿ ಅವರ ಸಲಹೆಗಳನ್ನು ಕೇಳಿ, ಅವುಗಳಲ್ಲಿ ಕೆಲವನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಈ ಬಗ್ಗೆ ತಾವೂ ಕೂಡ ಸಲಹೆಗಳನ್ನು ಕೊಟ್ಟಿದ್ದೀರಿ. ಇದಕ್ಕೆ ಸಂಬಂಧಪಟ್ಟ ಮಂತ್ರಿಯವರು ಈ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಕಾವೇರಿ ಸೆಕೆಂಡ್ ಸ್ಟೇಜ್‌ನ್ನು ಕಂಪ್ಲೀಟ್ ಮಾಡುವುದಕ್ಕೆ ಮತ್ತು ತಿನೇ ಸ್ಟೇಜ್‌ನ್ನು ಪ್ರಾರಂಭ ಮಾಡುವುದಕ್ಕೆ ಒಂದು ಎಸ್ಟಿಮೇಟನ್ನು ರೆಡಿಮಾಡಿ ಅದಕ್ಕೆ ಸಂಬಂಧಾರು ೨೫೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಯಾವ ಯಾವ ಕೆಲಸಗಳನ್ನು ಬಹಳ ತ್ವರಿತವಾಗಿ ಮಾಡಬೇಕೋ ಅದನ್ನೆಲ್ಲಾ ಅವರು ಬಹುತೇಕವಾಗಿ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಇಲ್ಲಿ ಏನೊಂದು ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನೆಲ್ಲಾ ಪರಿಶೀಲಿಸಿ ಈ ವಿಚಾರದಲ್ಲಿ ಜನರಿಗೆ ಸಹಾಯ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿಸುತ್ತೇನೆ.

Working of Channapatna Spun Silk Factory

886. Sri D. T. Ramu (Channapatna).—Will the Minister for Law and Parliamentary Affairs, Veterinary Services and Animal Husbandry be pleased to state.—

(a) the date on which the Channapatna Spun Silk Factory has been handed over to the Silk Industries Corporation by the Government ;

(b) the quantum of silk produced by the Factory at the time of handing over ;

(c) the quantum of its production at present ;

(d) if the production has been reduced, the reason therefor ?

SRI Y. RAMAKRISHNA (Minister for Law and Parliamentary Affairs, Veterinary Services and Animal Husbandry).—

(a) The Channapatna Spun Silk Factory has been handed over to Silk Industries Corporation with effect from 1st September, 1981.

(b) An average of 3663 kgs per month.

(c) Its average production is 3519 kgs per month at present.

(d) The production is reduced to some extent on account of acute shortage of power. In addition to the shortage of power, frequent interruption in the Supply of Electricity has affected production.

ಶ್ರೀ ಡಿ.ಟಿ. ರಾಮು.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಕೊಟ್ಟಿರತಕ್ಕಂಥ ಉತ್ತರದಲ್ಲಿ 'ಈ ವಿದ್ಯುಚ್ಛಕ್ತಿಯ ತೀವ್ರ ಕೊರತೆಯಿಂದ ಉತ್ಪಾದನೆ ಸ್ವಲ್ಪ ಕಡಿಮೆಯಾಗಿದೆ, ವಿದ್ಯುಚ್ಛಕ್ತಿಯ ಕೊರತೆಯ ಜೊತೆಗೆ ವಿದ್ಯುಚ್ಛಕ್ತಿಯ ಸರಬರಾಜಿನಲ್ಲಿ ಆಗಾಗ್ಗೆ ತೀವ್ರ ಏರುಪೇರಿನಿಂದ ಉತ್ಪತ್ತಿಯಂ ಮೇಲೆ ಪರಿಣಾಮ ಉಂಟಾಗಿದೆ' ಎಂದು ಹೇಳಿದ್ದಾರೆ. ಹಿಂದಿನ ವರ್ಷದಲ್ಲಿ ಈ ಒಂದು ಏರುಪೇರು ಅಥವಾ ಕೊರತೆ ಇರಲಿಲ್ಲವೇ ?

ಶ್ರೀ ವೈ. ರಾಮಕೃಷ್ಣ.—ಹಿಂದಿನ ವರ್ಷದಲ್ಲಿ ಎಷ್ಟು ಕೊರತೆ ಇತ್ತೋ ಅದಕ್ಕಿಂತಲೂ ಈ ವರ್ಷ ಕೊರತೆ ಜಾಸ್ತಿಯಾಗಿದೆ. ೧೯೮೦-೮೧ ರಲ್ಲಿ ೬೬.೨೭ ಗಂಟೆಗಳ ಕಾಲ ವಿದ್ಯುಚ್ಛಕ್ತಿ ನಿಂತದ್ದು ಇದೆ ; ೧೯೮೧-೮೨ರಲ್ಲಿ ೧೫೭.೪೯ ಗಂಟೆಗಳ ಕಾಲ ವಿದ್ಯುಚ್ಛಕ್ತಿ ನಿಂತಿತ್ತು, ಇಷ್ಟು ಗಂಟೆಗಳ ಕಾಲ ವಿದ್ಯುಚ್ಛಕ್ತಿ ನಿಂತದ್ದರಿಂದ ಉತ್ಪತ್ತಿ ಕಡಿಮೆಯಾಯಿತು.

ಶ್ರೀ ಡಿ.ಟಿ. ರಾಮು.—ಇದರ ಉತ್ಪಾದನೆಯಿಂದ ೧೯೮೦ರಲ್ಲಿ ಎಷ್ಟು ಲಾಭ ಬಂದಿದೆ ? ೧೯೮೧ ರಲ್ಲಿ ಎಷ್ಟು ಲಾಭ ಬಂದಿದೆ ? ಮತ್ತು ಈಗ ಎಷ್ಟು ಲಾಭ ಬಂದಿದೆ ?

ಶ್ರೀ ವೈ. ರಾಮಕೃಷ್ಣ.—೧೯೮೦-೮೧ರಲ್ಲಿ ೨೦ ಲಕ್ಷ ರೂಪಾಯಿಗಳು, ೧೯೮೧-೮೨ರಲ್ಲಿ ೪೨ ಲಕ್ಷ ರೂಪಾಯಿಗಳು.

ಶ್ರೀ ಎಚ್. ಗಂಗಾಧರನ್.—ಇಲ್ಲಿ ವಿದ್ಯುಚ್ಛಕ್ತಿಯ ಕೊರತೆಯ ಬಗ್ಗೆ ಹೇಳಿದ್ದೀರಿ. ಕೊರತೆ ಆದ ಹಿಂದಿನ ವರ್ಷ ಎಷ್ಟು ವಿದ್ಯುಚ್ಛಕ್ತಿ ಹಣ ಕೊಟ್ಟಿದ್ದೀರಿ ? ಮತ್ತು ಕೊರತೆ ಆದ ವರ್ಷದಲ್ಲಿ ಎಷ್ಟು ವಿದ್ಯುಚ್ಛಕ್ತಿ ಹಣ ಕೊಟ್ಟಿದ್ದೀರಿ ? ಈ ಬಗ್ಗೆ ಲೆಕ್ಕ ಇದೆಯೇ ?

ಶ್ರೀ ವೈ. ರಾಮಕೃಷ್ಣ.—ಇಷ್ಟು ಕೊರತೆ ಇದ್ದರೂ ೧೯೮೦-೮೧ರಲ್ಲಿ ೨೦ ಲಕ್ಷ ರೂ.ಗಳ ಲಾಭ ವಾಗಿದೆ. ೧೯೮೧-೮೨ರಲ್ಲಿ ೪೨ ಲಕ್ಷ ರೂಪಾಯಿಗಳಷ್ಟು ಲಾಭವಾಗಿದೆ. ಅಂದರೆ ಅದು ಡಬಲ್ ಆಗಿದೆ.

ಶ್ರೀ ಎಚ್. ಗಂಗಾಧರನ್.—ನಾನು ಕೇಳಿದ್ದು ಏನೆಂದರೆ, ಕೊರತೆ ಆದ ವರ್ಷದಲ್ಲಿ ಏನು ಎಲೆಕ್ಟ್ರಿಕ್ ಚಾರ್ಜಸ್ ಕೊಟ್ಟಿದ್ದೀರಿ ? ಮತ್ತು ಅದರ ಹಿಂದಿನ ವರ್ಷದಲ್ಲಿ ಏನು ಎಲೆಕ್ಟ್ರಿಕ್ ಚಾರ್ಜಸ್ ಕೊಟ್ಟಿದ್ದೀರಿ ಎಂದು. ಅದಕ್ಕೆ ಉತ್ತರ ಹೇಳಿ.

ಶ್ರೀ ವೈ. ರಾಮಕೃಷ್ಣ.—ಆ ವಿವರವನ್ನು ನಾನು ನಂತರ ಕೊಡುತ್ತೇನೆ.

ಶ್ರೀ ಡಿ.ಟಿ. ರಾಮು.—ಈಗ ಈ ರೇಷ್ಮೆ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ನೀವು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ವೈ. ರಾಮಕೃಷ್ಣ.—ನಾವು ಒಂದು ವಿಜ್ಞಾನ ಸಂಶೋಧನಾ ಸಂಸ್ಥೆಯೊಡನೆ, ಈ ಬಗ್ಗೆ ಒಂದು ಸಂಶೋಧನೆಯನ್ನು ನಡೆಸುವುದಕ್ಕೆ ಒಪ್ಪಂದವನ್ನು ಮಾಡಿಕೊಂಡಿದ್ದೇವೆ. ಅವರು ಬಂದು ಯಂತ್ರಗಳ ನವೀಕರಣೆ ಮಾಡಿ, ಈ ಬಗ್ಗೆ ಒಂದು ಎಕ್ಸ್‌ಪ್ಯಾನ್‌ಷನ್ ಸ್ಕೀಮನ್ನು ಹಾಕುತ್ತಾರೆ. ಅದು ಆದಕೂಡಲೇ ನಾವು ಪ್ರೊಡಕ್ಷನ್ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.